Vidyagiri
DHARWAD-04.

# ಉದ್ಯೋಗ ಪರ್ವದಲ್ಲೇನಿದೆ......?

• ಡಾ. ಆರ್. ವಿ. ಪಾಟೀಲ

*ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು !*
*ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೇ !!*
*ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ !*
*ಎಲ್ಲರೊಳಗೊಂದಾಗು–ಮಂಕುತಿಮ್ಮ !!*

ಮನೆಗೆ ಮಲ್ಲಿಗೆಯಾದ ಸುಸಂಸ್ಕೃತಿಯ ಮೃದು ಹೃದಯಿ. ನಿಷ್ಕಲ್ಮಷ–ನಿರ್ಮಲ ಮನಸ್ಸಿನ ಸಮನ್ವಯ ವ್ಯಕ್ತಿತ್ವ ಹೊಂದಿರುವ ಶ್ರೀ ನಾಗೇಶ ಬಾಬುರಾವ ಶೆಟ್ಟಿ ಅವರು ಬಹುಮುಖ ವ್ಯಕ್ತಿತ್ವ ಹೊಂದಿದವರು. ಕ್ರಿಯಾಶೀಲ ಉದ್ಯಮಿಗಳು. ಪ್ರಸ್ತುತ ಜಾಗತೀಕರಣದ ಸಂದರ್ಭದಲ್ಲಿ ಲಾಭ ಕೇಂದ್ರಿತ ವ್ಯಾಪಾರ ನಡೆಯುತ್ತಿದೆ. ಈ ಹೋಟೆಲ್ ಕ್ಷೇತ್ರದಲ್ಲಿ ಸಂಬಂಧಗಳು, ಸ್ನೇಹ, ಪ್ರೀತಿ, ನಂಬಿಕೆ, ವಿಶ್ವಾಸ, ಸಹಕಾರ, ತ್ಯಾಗ, ಪರೋಪಕಾರತೆ ಕಾಣಸಿಗುವುದೇ ಕಷ್ಟವಾಗಿದೆ. ಆದರೆ ನಾಗೇಶ ಬಾಬುರಾವ ಶೆಟ್ಟಿಯವರು ತಮ್ಮ ಮನೆತನದಲ್ಲಿ ಸಂಸ್ಕಾರವನ್ನು ಉಳಿಸಿ ಅಳವಡಿಸಿಕೊಂಡಿದ್ದಾರೆ. ತಂದೆಯವರಾದ ದಿ.ಶ್ರೀ. ಬಾಬುರಾವ ಶೆಟ್ಟಿಯವರಾದಿಯಾಗಿ ಬಂದ ಹೊಟೇಲ್ ಉದ್ಯಮವನ್ನು ಸಮಾಜಮುಖಿಯಾಗಿ ನಡೆಸಿಕೊಂಡು ಬಂದಿದ್ದಾರೆ. ಇಂದಿಗೂ ಅದೇ ಮುಂದುವರೆದಿದೆ. ಸದಾ ನಗು–ನಗುತ್ತಾ ಆತ್ಮೀಯ, ಮಧುರ ಭಾಷೆಯ ಮೂಲಕ ತಮ್ಮ ಹೋಟೆಲಿಗೆ ಬಂದವರು ಯಾರೇ ಆಗಿರಲಿ ಅವರನ್ನು ಸ್ವಾಗತಿಸಿ ಮನೆಗೆ ಬಂದ ಅತಿಥಿಗಳಂತೆ ಗೌರವ, ಸೌಜನ್ಯದೊಂದಿಗೆ ವ್ಯವಹರಿಸುವ ಸಹೃದಯತೆಯನ್ನು ದೇವರು ಅವರಿಗೆ ಕೊಡುಗೆಯಾಗಿ ನೀಡಿದ್ದಾನೆ. ದಿ.ಶ್ರೀ.ಬಾಬುರಾವ ಮಾಲಕರು ಸಮುದ್ರದಂತ ವ್ಯಕ್ತಿತ್ವದವರು. ತಮ್ಮೊಂದಿಗಿದ್ದವರನ್ನು ಜೊತೆ–ಜೊತೆಗೆ ಕರೆದುಕೊಂಡು ಹೋಗುವ ಮನೋಧರ್ಮ ಹೊಂದಿದವರು. ಹಾಗೆಯೇ ಅವರ ಪುತ್ರರಾದ ನಾಗೇಶ ಶೆಟ್ಟಿಯವರು ಇರುವವರು. ಈಶ್ವರ ಸಣಕಲ್ಲ ಅವರ ಹಾಡಿನಂತೆ "ಜಗವೆಲ್ಲ ನಗುತಿರಲಿ ಜಗದಳಲು ನನಗಿರಲಿ, ನಾನತ್ತು ಜಗವು ನಗುತಿರಲು ನನ್ನನ್ನು ಎತ್ತಿಕೊಳ್ಳದೆ" ಎಂಬ ಸಂಸ್ಕೃತಿ–ಸಂಸ್ಕಾರದವರು.

ಸುಮಾರು ವರ್ಷಗಳಿಂದ ಹೊಟೇಲ್ ಉದ್ಯಮದೊಂದಿಗೆ ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಮೈಸೂರು ರೆಸ್ಟೋರೆಂಟ್ ಮಾಲಕರ ಪ್ರತಿಷ್ಠಿತ ಮನೆತನವು ತನ್ನದೇ ಆದ ವಿಶಿಷ್ಟ ಬದುಕನ್ನು ನಡೆಸಿ ಸಹನೆ, ಪ್ರೀತಿ, ವಿಶ್ವಾಸ, ನಂಬಿಕೆ, ವಿನಯಶೀಲತೆ, ಆಚಾರ–ವಿಚಾರಗಳೊಂದಿಗೆ ಶ್ರಮ ಸಂಸ್ಕೃತಿಗೆ ಮಾದರಿಯಾಗಿದೆ. 'ನುಡಿದಂತೆ ನಡೆ, ನಡೆದಂತೆ ನುಡಿ' ಎಂಬ ತತ್ವವನ್ನು ಅಕ್ಷರಶಃ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದಾರೆ. ಶರಣರ ನಾಡಿನಲ್ಲಿ ಹುಟ್ಟಿ ಬೆಳೆದ ಈ ಮನೆತನ ಶರಣರ ಸಂಸ್ಕೃತಿಯ ಮಹಾಮಾರ್ಗದಲ್ಲಿ 'ಕಾಯಕವೇ ಕೈಲಾಸ'ವೆಂದು ಸಾರ್ಥಕ ಬದುಕನ್ನು ನಡೆಸುತ್ತಿದ್ದಾರೆ.

ಭವ್ಯ ಪರಂಪರೆಯನ್ನು ಹೊಂದಿರುವ ಐತಿಹಾಸಿಕ ನಗರ ವಿಜಯಪುರದಲ್ಲಿ ಶ್ರೀ.ನಾಗೇಶ ಬಾಬುರಾವ್ ಶೆಟ್ಟಿಯವರ ಕುಟುಂಬ ಇವರ ತಂದೆಯವರಾದಿಯಾಗಿ ಬಹುಕಾಲದಿಂದ ನೆಲೆಸಿದ್ದು, ಈ ಪರಿಸರದ ಮಣ್ಣಿನ ಗುಣ ಇವರಲ್ಲಿ ಮೈಗೂಡಿರುವುದು ಸಹಜ. ಇಂತಹ ಸಾರ್ಥಕ ಬದುಕಿನ ಸ್ಫೂರ್ತಿಯ ಚಿಲುಮೆಯಾಗಿರುವ ದಿ.ಬಾಬುರಾವ ಅಂತಪ್ಪ ಶೆಟ್ಟಿ ಮತ್ತು ಮಾತೋಶ್ರೀ ಲಲಿತಾ ಬಾಬುರಾವ ಶೆಟ್ಟಿ ಅವರ ಮಕ್ಕಳಾದ ಶ್ರೀ.ನಾಗೇಶ ಶೆಟ್ಟಿ, ಶ್ರೀ ಚಂದ್ರಕಾಂತ, ಶ್ರೀ ಶರತಕುಮಾರ, ಶ್ರೀಕಾಂತ ಶೆಟ್ಟಿಯವರು ಹಾಗೂ ಕುಟುಂಬದವರು ಸ್ನೇಹ, ಪ್ರೀತಿ, ಸಹಬಾಳ್ವೆ ಸಹೋದರತ್ವವನ್ನು ಅಳವಡಿಸಿಕೊಂಡು ಉದ್ಯಮದಲ್ಲಿ ಯಶಸ್ವಿ ಪಡೆದು ಶ್ರಮದ ಬದುಕಿಗೆ ಸಾಕ್ಷಿಯಾಗಿರುವವರು.



PRINCIPAL
J.S.S. Banashankari Arts, Commerce &
Shantikumar Gubbi Science College,
DHARWAD - 580 004.